# ಎಫ್‌ಡಿಎ ಹುದ್ದೆ 15-25 ಲಕ್ಷ ರೂಪಾಯಿಗೆ ಮಾರಾಟ
## ಅಕ್ರಮ ಜಾಲದಲ್ಲಿ ಸರ್ಕಾರಿ ಅಧಿಕಾರಿಗಳೇ ಪಾಲುದಾರರು
# ಕೆಪಿಎಸ್‌ಸಿ ಫುಲ್ ಸೇಲ್

ದೇವರಾಜ್ ಕನಕಪುರ ಬೆಂಗಳೂರು

ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್ಸಿ) ನಡೆಸುವ ಬಹುತೇಕ ಪರೀಕ್ಷೆಗಳಲ್ಲಿ ಅಲ್ಲಿನ ಅಧಿಕಾರಿಗಳೇ 'ಪ್ಯಾಕೇಜ್ ಡೀಲಿಂಗ್' ನಡೆಸುತ್ತಾರೆಂಬ ವಿಚಾರ ಬಯಲಾಗಿದೆ. ಪ್ರಶ್ನೆಪತ್ರಿಕೆ ಸೋರಿಕೆಯಿಂದ ಹಿಡಿದು ನೇಮಕಾತಿ ಆದೇಶ ಕೈ ಸೇರುವವರೆಗೂ ಒಪ್ಪಂದ ಆಗುತ್ತದೆ. ಒಂದಾದ ಮೇಲೊಂದು ಹಗರಣಗಳು ಬಹಿರಂಗಗೊಳ್ಳುವ ಮುಖಾಂತರ ಕೆಪಿಎಸ್ಸಿ ಮೇಲಿನ ಅಭ್ಯರ್ಥಿಗಳ ನಂಬಿಕೆ ಸುಳ್ಳಾಗುತ್ತಿದೆ.

ಸರ್ಕಾರಿ ಉದ್ಯೋಗ ಪಡೆಯಬೇಕೆಂಬ ಕನಸು ಹೊತ್ತ ಲಕ್ಷಾಂತರ ಅಭ್ಯರ್ಥಿಗಳು ಸ್ಪರ್ಧಾತ್ಮಕ ತರಬೇತಿ ಕೇಂದ್ರಗಳಿಗೆ ಸೇರಿ, ಸಾಕಷ್ಟು ಅಧ್ಯಯನ ನಡೆಸುತ್ತಾರೆ. ಆದರೆ, ಅವ್ಯವಹಾರದಿಂದಾಗಿ ದುಡ್ಡಿದ್ದವರಿಗೆ ಮಾತ್ರ ಸರ್ಕಾರಿ ಕೆಲಸ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ.

ವಿಜಯವಾಣಿ ವಿಶ್ಲೇಷಣೆ


ಎಫ್‌ಡಿಎ ಹುದ್ದೆಗೆ 15-25 ಲಕ್ಷ ರೂ.: ಏಜೆಂಟ್‌ಗಳ ಮುಖಾಂತರ ಕೆಪಿಎಸ್ಸಿ ಅಧಿಕಾರಿಗಳೇ ಡೀಲ್ ಕುದುರಿಸುತ್ತಾರೆ. ಎಫ್‌ಡಿಎ ಹುದ್ದೆಗೆ ಸಾಮಾನ್ಯವಾಗಿ 15 ಲಕ್ಷದಿಂದ 25 ಲಕ್ಷ ರೂ.ವರೆಗೆ ದರ ನಿಗದಿಯಾಗಿದೆ. ಡೀಲ್ ಆರಂಭದಲ್ಲಿ ಒಟ್ಟಾರೆ ಒಪ್ಪಂದದ ಕನಿಷ್ಠ ಶೇ.75 ಹಣವನ್ನು ಅಭ್ಯರ್ಥಿಗಳು ಕೊಡಬೇಕು. ಪರೀಕ್ಷೆ ಹಿಂದಿನ ದಿನ ಹಣ ಕೊಟ್ಟ ಅಭ್ಯರ್ಥಿಗಳನ್ನು ರಾತ್ರೋರಾತ್ರಿ ಕಾರಿನಲ್ಲಿ ಕರೆದುಕೊಂಡು ಪ್ರತ್ಯೇಕ ಮನೆ ಅಥವಾ ರೂಂಗೆ ಕರೆತರುತ್ತಾರೆ. ಈ ವೇಳೆ ಅಭ್ಯರ್ಥಿಯ ಬಳಿ ಮೊಬೈಲ್ ಫೋನ್, ರೆಕಾರ್ಡರ್ ಯಾವುದೂ ಇಲ್ಲವೆಂದು ಖಚಿತ ಪಡಿಸಿಕೊಳ್ಳುತ್ತಾರೆ. ಪ್ರಶ್ನೆಪತ್ರಿಕೆಗೆ ಮೊದಲೇ ಕೀ-ಉತ್ತರಗಳನ್ನು ತರುವ ಏಜೆಂಟರು ಎರಡು-ಮೂರು ಬಾರಿ ಯಾವ ಪ್ರಶ್ನೆಗೆ ಯಾವ ಉತ್ತರ ಎಂಬುದನ್ನು ಅಭ್ಯರ್ಥಿಗಳಿಗೆ ಮನದಟ್ಟು ಮಾಡಿಸುತ್ತಾರೆ. ಬಹಳ ಮುಖ್ಯವಾಗಿ ಪ್ರಶ್ನೆಪತ್ರಿಕೆಯ ಶ್ರೇಣಿ ಬದಲಾಗುವುದರಿಂದ ವಿದ್ಯಾರ್ಥಿಗಳು ಎಚ್ಚರ ವಹಿಸಬೇಕೆಂದು ಮೊದಲೇ ಸೂಚಿಸಿ ಕೀ-ಉತ್ತರಗಳನ್ನು ಮಾತ್ರ ನೆನಪಿನಲ್ಲಿಟ್ಟುಕೊಳ್ಳುವಂತೆ ಸೂಚಿಸುತ್ತಾರೆ.

ಪುಟ 9



## ಉತ್ತರ ಖಾಲಿ ಬಿಡಿ, ಅವರೇ ಬರೀತಾರೆ!

ಪ್ರಶ್ನೆಪತ್ರಿಕೆ ಸಿಕ್ಕರೂ ಸಹ ಉತ್ತರಗಳನ್ನು ನೆನಪಿನಲ್ಲಿಟ್ಟುಕೊಂಡು ಪರೀಕ್ಷೆ ಬರೆಯುವುದು ಕೆಲ ಅಭ್ಯರ್ಥಿಗಳಿಗೆ ಸವಾಲಿನ ಪ್ರಶ್ನೆ. ಅಂತಹ ಅಭ್ಯರ್ಥಿಗಳನ್ನು ಡೀಲ್-2ಗೆ ಒಪ್ಪಿಸುತ್ತಾರೆ. ಈ ಡೀಲ್‌ಗೆ ಸ್ವಲ್ಪ ಹೆಚ್ಚಿನ ಹಣ ಪಾವತಿಸಬೇಕಿರುತ್ತದೆ. ಹಣ ಪಡೆದ ಮೇಲೆ ಏಜೆಂಟರು ಅಭ್ಯರ್ಥಿಗಳಿಗೆ ಮೊದಲೇ ಯಾವ ಪೆನ್ ಬಳಕೆ ಮಾಡಬೇಕೆಂದು ಸೂಚಿಸುತ್ತಾರೆ. ಅದೇ ಕಂಪನಿಯ ಪೆನ್‌ಗಳನ್ನು ಏಜೆಂಟ್‌ಗಳು ಹೊಂದಿರುತ್ತಾರೆ. ಬಹು ಆಯ್ಕೆ ಮಾದರಿಯ ಪ್ರಶ್ನೆ ಪತ್ರಿಕೆಯಾಗಿರುವುದರಿಂದ ಯಾವುದೇ ಅನುಮಾನವಿಲ್ಲದಂತೆಯೇ ಉತ್ತರ ಪತ್ರಿಕೆಯಲ್ಲಿ ಬೇರೊಬ್ಬರು ಭರ್ತಿ ಮಾಡಬಹುದಾಗಿದೆ. ಅಭ್ಯರ್ಥಿಗಳು ಪರೀಕ್ಷೆಯಲ್ಲಿ ನೀಡುವ ಉತ್ತರ ಪತ್ರಿಕೆಯ ಒಎಂಆರ್ ಶೀಟ್‌ನಲ್ಲಿ ಸಹಿ ಮಾಡಿ ಶೇ.100 ಉತ್ತರ ಗೊತ್ತಿರುವುದನ್ನು ಮಾತ್ರ ಟಿಕ್ ಮಾಡಿದರೆ ಸಾಕು. ಉಳಿದವನ್ನು ಹಾಗೇ ಖಾಲಿ ಬಿಟ್ಟು ಬಂದಲ್ಲಿ ಏಜೆಂಟ್‌ಗಳು ಅವನ್ನು ಭರ್ತಿ ಮಾಡುತ್ತಾರೆ. ಮೂಲಗಳ ಮಾಹಿತಿ ಪ್ರಕಾರ ಪರೀಕ್ಷಾ ಕೇಂದ್ರದಲ್ಲೇ ಉತ್ತರ ಪತ್ರಿಕೆಗಳು ಬಂಡಲ್ ಆಗಿ ಗಾಡಿಗೆ ಲೋಡ್ ಆಗುವ ಮೊದಲೇ ಬರೆಯುತ್ತಾರೆ.



ಪ್ರಶ್ನೆಪತ್ರಿಕೆ ಪ್ರಕರಣದ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಅತೀ ಶೀಘ್ರದಲ್ಲೇ ಆರೋಪಿಗಳನ್ನು ಬಂಧಿಸುತ್ತೇವೆ. ಈ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಎಷ್ಟೇ ಪ್ರಭಾವಿಗಳಿದ್ದರೂ ಪ್ರಕರಣಕ್ಕೆ ಕಾರಣರಾದವರನ್ನು ಬಂಧಿಸುತ್ತೇವೆ. ಸದ್ಯ ಬಂಧಿತರ ವಿಚಾರಣೆ ನಡೆಸಿ ತನಿಖೆ ಮುಂದುವರಿಸುತ್ತೇವೆ.

ಬಸವರಾಜ ಬೊಮ್ಮಾಯಿ ಗೃಹ ಸಚಿವ

## ಆಯೋಗಕ್ಕೆ ಆಗಬೇಕಿದೆ ಸರ್ಜರಿ

ಎಫ್‌ಡಿಎ ಪರೀಕ್ಷೆ ಪ್ರಶ್ನೆಪತ್ರಿಕೆ ಬಹಿರಂಗವಾದ ಬೆನ್ನಲ್ಲೇ, ಕರ್ನಾಟಕ ಲೋಕಸೇವಾ ಆಯೋಗ 'ಲೋಪ' ಸೇವಾ ಆಯೋಗ ಎಂಬ ಅಪಖ್ಯಾತಿಗೆ ಗುರಿಯಾಗುವ ಸಂದರ್ಭವನ್ನು ಮತ್ತೊಮ್ಮೆ ಸೃಷ್ಟಿಕೊಂಡಿದೆ. ಸ್ವಜನ ಪಕ್ಷಪಾತ, ಸ್ವಜಾತಿ ಪ್ರೇಮ, ಸ್ವ ಹಿತಾಸಕ್ತಿ, ರಾಜಕೀಯ ಹಸ್ತಕ್ಷೇಪವೇ ಇಲ್ಲಿ ಹೆಚ್ಚಾಗಿದೆ. ಕೇಂದ್ರ ಲೋಕಸೇವಾ ಆಯೋಗದ ಮಾಜಿ ಅಧ್ಯಕ್ಷ ಹೋಟಾ ನೇತೃತ್ವದ ಸಮಿತಿಯು ಬಹಳ ಹಿಂದೆಯೇ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರ ನೇಮಕವನ್ನು ಶೋಧನಾ ಸಮಿತಿ ಮೂಲಕ ಮಾಡಬೇಕೆಂಬ ಶಿಫಾರಸು ಮಾಡಿದ್ದರು. ಆದರೆ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಮಾಜಿಕ ನ್ಯಾಯ ಕಾಪಾಡುವ ಉದ್ದೇಶದಿಂದ ಈ ಶಿಫಾರಸು ಒಪ್ಪಲ್ಲವೆಂದಿದ್ದರು. ಒಟ್ಟಿನಲ್ಲಿ ಕೆಪಿಎಸ್‌ಸಿ ಸುಧಾರಣೆಯ ಹಳಿ ಹತ್ತುವ ಸಾಧ್ಯತೆಯೇ ಗೋಚರವಾಗುತ್ತಿಲ್ಲ.

ವಿವರ ಪುಟ 7

### 15 ಜನರ ಸೆರೆ

ಎಫ್‌ಡಿಎ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಮೂವರು ಸರ್ಕಾರಿ ಅಧಿಕಾರಿಗಳು ಹಾಗೂ 12 ಮಂದಿ ಅಭ್ಯರ್ಥಿಗಳು ಸೇರಿ ಒಟ್ಟು 15 ಮಂದಿಯನ್ನು ಬಂಧಿಸಲಾಗಿದೆ. ಬಂಧಿತರ ಸಂಖ್ಯೆ ಇನ್ನಷ್ಟು ಹೆಚ್ಚುವ ಸಾಧ್ಯತೆ ಇದೆ. ಕೆಪಿಎಸ್ಸಿಯ ಎಫ್‌ಡಿಎ ದರ್ಜೆ ನೌಕರರೇ ಪ್ರಶ್ನೆಪತ್ರಿಕೆ ಸೋರಿಕೆ ಮಾಡಿರುವುದು ಪ್ರಾಥಮಿಕ ತನಿಖೆಯಲ್ಲಿ ದೃಢಪಟ್ಟಿದೆ. ಇಬ್ಬರು ಪ್ರಮುಖ ಆರೋಪಿಗಳು ತಲೆಮರೆಸಿಕೊಂಡಿದ್ದು, ಹುಡುಕಾಟ ಮುಂದುವರಿದಿದೆ.

ವಿವರ ಪುಟ 7

# ಕೆಪಿಎಸ್‌ಸಿ ಫುಲ್ ಲೀಕ್

ಮೊದಲನೇ ಪುಟದಿಂದ... 25-1-2021

ಅನಂತರ ವಿದ್ಯಾರ್ಥಿಗಳು ಮರುದಿನ ಪರೀಕ್ಷೆಯಲ್ಲಿ ಉತ್ತರ ಬರೆಯಬೇಕು. ಅದೇ ಪ್ರಶ್ನೆಗಳು ಬಂದಿವೆ ಎಂಬುದು ಖಚಿತವಾದ ತಕ್ಷಣ ಅಭ್ಯರ್ಥಿಗಳು ಉಳಿದ ಶೇ. 25 ಹಣ ನೀಡಬೇಕಾಗುತ್ತದೆ. ಹಣದ ವ್ಯವಹಾರ ನಗದು ರೂಪದಲ್ಲಿ ಮಾತ್ರವೇ ನಡೆಯುತ್ತದೆ.

**ಪ್ರಶ್ನೆಪತ್ರಿಕೆ ಸೋರಿಕೆ ಏಕೆ?:** ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸುವ ಯಾವ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಯೂ ಈವರೆಗೆ ಸೋರಿಕೆ ಆಗಿಲ್ಲ. ಕೆಪಿಎಸ್ಸಿ ನಡೆಸುವ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳೇ ಸೋರಿಕೆ ಏಕೆಂಬ ಪ್ರಶ್ನೆ ಕಾಡುತ್ತದೆ. ಕೇವಲ ಸಿಇಟಿಗಾಗಿ ಆರಂಭವಾದ ಕೆಇಎ ತದನಂತರದಲ್ಲಿ ಸರ್ಕಾರಿ ಇಲಾಖೆಗಳಲ್ಲಿನ ವಿವಿಧ ಹುದ್ದೆಗಳ ಭರ್ತಿ ಜವಾಬ್ದಾರಿ ನಿರ್ವಹಿಸುತ್ತಿದೆ. ಸಹಾಯಕ ಪ್ರಾಧ್ಯಾಪಕರ ಹುದ್ದೆ, ಪಿಯು ಉಪನ್ಯಾಸಕ, ಬಿಎಂಆರ್‌ಸಿಎಲ್, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ(ಪಿಡಿಒ) ಸೇರಿ 30ಕ್ಕೂ ಹೆಚ್ಚು ಹುದ್ದೆಗಳ ನೇಮಕಾತಿ ನಡೆಸುತ್ತಿದೆ. ಸ್ಪರ್ಧಾತ್ಮಕ ಪರೀಕ್ಷೆ ವೇಳೆ ಇಲ್ಲಿ ಸಾಕಷ್ಟು ಸುರಕ್ಷತಾ ಕ್ರಮಗಳನ್ನು ಅನುಸರಿಸಲಿದ್ದು, ಪರೀಕ್ಷಾ ಕಾರ್ಯದಲ್ಲಿ ಹೆಚ್ಚಿನ ಅಧಿಕಾರಿಗಳನ್ನು ನಿಯೋಜನೆ ಮಾಡಿಕೊಳ್ಳುವುದಿಲ್ಲ. ಕೆಇಎ ಪ್ರಶ್ನೆ ಪತ್ರಿಕೆ ಸಿದ್ಧಪಡಿಸುವುದರಿಂದ ಮುದ್ರಿಸಿ ನೀಡುವವರೆಗೂ

## ತರಬೇತಿ ಕೇಂದ್ರಗಳ ಮೇಲೂ ಶಂಕೆ

ಸಾಮಾನ್ಯವಾಗಿ ಎಸ್ಸೆಸ್ಸೆಲ್ಸಿ ಮತ್ತು ಪಿಯು ಪ್ರಶ್ನೆಪತ್ರಿಕೆಗಳು ಸೋರಿಕೆಯಾದಾಗ ಟ್ಯೂಷನ್ ಕೇಂದ್ರಗಳ ಮೇಲೆ ಅನುಮಾನ ಪಡಲಾಗುತ್ತದೆ. ಇದೇ ರೀತಿ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳು ಸೋರಿಕೆಯಾದಾಗ ಮೊದಲಿಗೆ ತರಬೇತಿ ಕೇಂದ್ರಗಳ ಮೇಲೆ ಅನುಮಾನ ಮೂಡುತ್ತದೆ. ಈ ಹಿಂದೆ ಕೆಲವು ಕೆಎಎಸ್ ನಂತಹ ಪ್ರಶ್ನೆಪತ್ರಿಕೆಗಳು ಸೋರಿಕೆಯಾದಾಗ ಕೆಲವು ಪ್ರತಿಷ್ಠಿತ ತರಬೇತಿ ಕೇಂದ್ರಗಳ ಮುಖ್ಯಸ್ಥರು ಇದರಲ್ಲಿ ಶಾಮೀಲಾಗಿರುವುದು ಬಯಲಾಗಿತ್ತು.

ಕಾರ್ಯನಿರ್ವಾಹಕ ನಿರ್ದೇಶಕರು ಗೌಪ್ಯತೆ ಕಾಪಾಡಿಕೊಳ್ಳುತ್ತಾರೆ. ಪ್ರಶ್ನೆಪತ್ರಿಕೆ ಸಾಗಿಸುವ ಪ್ರತಿ ವಾಹನಕ್ಕೂ ಸಿಸಿ ಕ್ಯಾಮೆರಾ, ಜಿಪಿಎಸ್ ಅಳವಡಿಸಲಾಗಿರುತ್ತದೆ. ಪ್ರಶ್ನೆಪತ್ರಿಕೆ ಮುದ್ರಣ ಮಾಡುವವರು ಹೆಚ್ಚಿನ ಗೌಪ್ಯತೆ ಕಾಪಾಡಿಕೊಳ್ಳುವುದಕ್ಕಾಗಿಯೇ ಮುದ್ರಣದ ವೆಚ್ಚವನ್ನು ಹೆಚ್ಚು ನಿಗದಿ ಮಾಡಿರುತ್ತಾರೆ. ಹೊರ ರಾಜ್ಯದಲ್ಲಿ ಪ್ರಶ್ನೆಪತ್ರಿಕೆ ಮುದ್ರಣವಾಗುತ್ತದೆ. ಇದೇ ರೀತಿಯ ಭದ್ರತಾ ವ್ಯವಸ್ಥೆಯನ್ನು ಕೆಪಿಎಸ್ಸಿ ಕೂಡ ಪಾಲಿಸಬೇಕು. ಇಲ್ಲವಾದರೆ ಎಲ್ಲ ಪರೀಕ್ಷೆಗಳ ಹೊಣೆಯನ್ನು ಕೆಇಎಗೆ ವಹಿಸಬೇಕು ಎಂಬ ಮಾತುಗಳೂ ಕೇಳಿಬರುತ್ತಿವೆ.